ಅಸಲು ದಾವಾ ನಂಃ22/2019
ಪಿ.ಡಬ್ಲ್ಯೂ- 03/ಮಲ್ಲಯ್ಯ

**<u>ದಿನಾಂಕಃ 28.03.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಎಂ.ಬಿ., ಪ್ರತಿವಾದಿ ಪರ ವಕೀಲರಿಂದ</u>**

2. ಸರ್ವೆ ನಂಬರ್ 134/1 ಕ್ಷೇತ್ರ 24 ಎಕರೆ 16 ಗುಂಟೆ ಜಮೀನು ಮೂಲತಃ ನನ್ನ ತಂದೆ ಈರಮಲ್ಲಪ್ಪ ಇವರು ದಿನಾಂಕ.20.02.1949 ರಂದು ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆ ಎಂದು ನಾನು ಕ್ರಯ ಪತ್ರವೇನಾದರೂ ನೀಡಿರುತ್ತೀರಾ ಎಂದರೆ ಸಾಕ್ಷಿಯು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಿನಾಂಕ.20.02.1949 ರ ಕ್ರಯ ಪತ್ರವನ್ನು ಹಾಜರುಪಡಿಸದೇ ಇದ್ದರು ಕೂಡ ಹಾಜರುಪಡಿಸಿರುತ್ತೇನೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ.11.06.1963 ರಂದು ನನ್ನ ತಂದೆ ಸಣ್ಣ ಮಲ್ಲಪ್ಪ ಬಿನ್ ಕೋಲಾಟದ ಮಲ್ಲಪ್ಪ ಇವರಿಗೆ ಒಟ್ಟು ವಿಸ್ತೀರ್ಣದ ಪೈಕಿ 4 ಎಕರೆ ಜಮೀನನ್ನು ಮತ್ತು ಅದೇ ದಿನ ಇನ್ನುಳಿದ 4 ಎಕರೆ ಜಮೀನನ್ನು ನನ್ನ ತಂದೆ ಭೀಮಾಚಾರಿ ಬಿನ್ ಮಲ್ಲಯ್ಯ ಇವರಿಗೆ ಮಾರಾಟ ಮಾಡಿದಾಗ ನಾನು ಹಾಜರಿದ್ದೇನಾ ಎಂದರೆ ಸಾಕ್ಷಿಯು ಆಗ ನನಗೆ ಕೇವಲ 11 ವರ್ಷ ವಯಸ್ಸು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಇಬ್ಬರಿಗೆ ತಲಾ 4 ಎಕರೆ ಜಮೀನನ್ನು 300/-ರೂಪಾಯಿಗಳಿಗೆ ಮಾರಾಟ ಮಾಡಿರುವುದು ನಿಜ ಎಂದು ನುಡಿಯುತ್ತಾರೆ.

3. ಸಣ್ಣಮಲ್ಲಪ್ಪ ಬಿನ್ ಕೋಲಾಟದ ಮಲ್ಲಪ್ಪ ನನ್ನ ತಂದೆಯಿಂದ ಕ್ರಯಕ್ಕೆ ತೆಗೆದುಕೊಂಡ 4 ಎಕರೆ ಜಮೀನನ್ನು ದಿನಾಂಕ.19.02.1970 ರಂದು ಪ್ರತಿವಾದಿಗಳ ತಾಯಿಯಾದ ಮಲ್ಲಕ್ಕ ಕೋಂ ಚಿಕ್ಕಚಿತ್ತಪ್ಪ ಇವರಿಗೆ 300/- ರೂಪಾಯಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ರೀತಿ ಮಾರಾಟ ಮಾಡಿದಾಗ ನನಗೆ ಸುಮಾರು 20 ವರ್ಷ ವಯಸ್ಸು ಇರಬಹುದು. ನನ್ನ ತಂದೆ ಸಣ್ಣ ಮಲ್ಲಪ್ಪ ಮತ್ತು ಭೀಮಾಚಾರಿ ಇವರಿಗೆ ಮಾರಾಟ ಮಾಡಿದಾಗ ಅಳತೆ ಮಾಡಿ ಮಾರಾಟ ಮಾಡಿರುತ್ತಾರಾ ಎಂದರೆ ಸಾಕ್ಷಿಯು ಹೌದು ಅಳತೆ ಮಾಡಿಸಿ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತಲಾ 4 ಎಕರೆ ಜಮೀನನ್ನು ಮಲ್ಲಪ್ಪ ಮತ್ತು ಭೀಮಾಚಾರಿಗೆ ಅಂದಾಜಿನ ಆಧಾರದ ಮೇಲೆ ಮಾರಾಟ ಮಾಡಿದ್ದು, ನಾನು ಹೇಳುವಂತೆ ಅಳತೆ ಮಾಡಿಸಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಅಳತೆ ಮಾಡಿಸಿ ನನ್ನ ತಂದೆ ಮಾರಾಟ ಮಾಡಿದ ಕುರಿತು ನನ್ನ ಬಳಿ ಈಗ ಯಾವುದೇ ದಾಖಲೆಗಳು ಇರುವುದಿಲ್ಲ. ಮಲ್ಲಕ್ಕ ಕೋಂ ಚಿಕ್ಕಚಿತ್ತಪ್ಪ ಮತ್ತು ಭೀಮಾಚಾರಿ ಇವರುಗಳು ಅವರವರ ಕ್ರಯ ಪತ್ರಗಳಲ್ಲಿ ನಮೂದಿಸಿರುವಂತಹ ಚೆಕ್ಕುಬಂಧಿಯಲ್ಲಿ ಅವರವರೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬದು ಹಾಕಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

4. ಮಾರಾಟ ಮಾಡಿರುವ ಜಮೀನು ಮತ್ತು ನಮ್ಮ ಉಳಿಕೆ ಜಮೀನನ್ನು ನಾನು ಯಾವತ್ತಾದರೂ ಅಳತೆ ಮಾಡಿಸಿರುತ್ತೀನಾ ಎಂದರೆ ಸಾಕ್ಷಿಯು 3 ವರ್ಷಗಳ ಹಿಂದೆ ಮಾಡಿಸಿದ್ದೆ ಎಂದು ನುಡಿಯುತ್ತಾರೆ. ಮಾರಾಟ ಮಾಡಿರುವ ಜಮೀನು ಮತ್ತು ಉಳಿಕೆ ಜಮೀನಿಗೆ ಪೋಡು ಆಗಿರುತ್ತದೆಯೇ ಎಂದರೆ ಸಾಕ್ಷಿಯು ಪೋಡು ಆಗಿಲ್ಲ, ಬದು ಹಾಕಿಕೊಂಡಿರುತ್ತೇನೆ ಆದರೆ ಅರ್ಧ ಎಕರೆ ಅಷ್ಟು ಅತಿಕ್ರಮಣವಾಗಿರುತ್ತದೆ ಎಂದು ನುಡಿಯುತ್ತಾರೆ. ಮಾರಾಟ ಮಾಡಿರುವ ಎರಡು ಜಮೀನುಗಳ ಸರ್ವೆ ನಂಬರ್ 134/1 ಮತ್ತು 134/2 ಅಂತ ಪ್ರತ್ಯೇಕವಾಗಿ ಪೋಡುಗಳಾಗಿರುತ್ತವೆ. ಪ್ರತಿವಾದಿಯವರ ಪಹಣಿ ಪತ್ರಿಕೆಗಳಲ್ಲಿ ವಿಸ್ತೀರ್ಣವನ್ನು 4 ಎಕರೆ 20 ಗುಂಟೆ ಅಂತ ತೋರಿಸಲಾಗಿದ್ದು, ಅದು ತಪ್ಪು ಇರುತ್ತದೆ ಅವರಿಗೆ ಕೇವಲ 4 ಎಕರೆ ಜಮೀನಿನಲ್ಲಿ ಮಾತ್ರ ಹಕ್ಕು ಇರುತ್ತದೆ. ಪ್ರತಿವಾದಿಗಳ ಜಮೀನಿನ ಪಹಣಿ ಪತ್ರಿಕೆಗಳಲ್ಲಿ 5 ಎಕರೆ ವಿಸ್ತೀರ್ಣ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ಮಾರಾಟ ಮಾಡಿರುವುದೇ 4 ಎಕರೆ ಜಮೀನಾಗಿದ್ದು, ಅದು ಹೇಗೆ 5 ಎಕರೆ ವಿಸ್ತೀರ್ಣಕ್ಕೆ ಪಹಣಿ ಪತ್ರಿಕೆಗಳು ಬರುತ್ತವೆ ಎಂದು ನುಡಿಯುತ್ತಾರೆ. ಒಟ್ಟು ಕ್ಷೇತ್ರದ ಜಮೀನಿನಲ್ಲಿ ಖರಾಬು ಜಮೀನಿದ್ದು, ಅದರಲ್ಲಿ ರಸ್ತೆ ಮತ್ತು ಹಳ್ಳ ಇರುತ್ತದೆ ಎಂದರೆ ಸರಿಯಲ್ಲ.

5. ಪ್ರತಿವಾದಿಯವರ ಪಹಣಿಯಲ್ಲಿ ರಸ್ತೆ ಮತ್ತು ಹಳ್ಳದ ಪ್ರದೇಶವನ್ನು ಸೇರಿಸಿಕೊಂಡು 5 ಎಕರೆ ವಿಸ್ತೀರ್ಣದ ಜಮೀನಿನ ಪಹಣಿ ಪತ್ರಿಕೆ ಬರುತ್ತಿವೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಹೆಸರಿನಲ್ಲಿ 5 ಎಕರೆ ವಿಸ್ತೀರ್ಣದ ಕುರಿತು ಪಹಣಿ ಪತ್ರಿಕೆಗಳು ಬರುತ್ತಿರುವುದನ್ನು ಪ್ರಶ್ನಿಸಿ ಎ.ಡಿ.ಎಲ್.ಆರ್. ಮೇಲ್ಮನವಿ ಸಂಖ್ಯೆ.99/2011-12 ರಂತೆ ಮೇಲ್ಮನವಿ ಸಲ್ಲಿಸಿದ್ದು, ಅದು ದಿನಾಂಕ.09.06.2016 ರಂದು ವಜಾ ಗೊಂಡಿರುತ್ತದೆ ಎಂದರೆ ಸಾಕ್ಷಿಯು ಅದನ್ನು ನಾವು ಒಪ್ಪುವುದಿಲ್ಲ ಅಂತ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಎ.ಡಿ.ಎಲ್.ಆರ್. ಮೇಲ್ಮನವಿ ಸಂಖ್ಯೆ.99/2011-12 ರ ಆದೇಶವನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

6. ನನ್ನ ತಂದೆ ಮಾರಾಟ ಮಾಡಿರುವುದನ್ನು ಹೊರತುಪಡಿಸಿ ನನ್ನ ಸ್ವಾಧೀನದಲ್ಲಿ 15 ಎಕರೆ 27 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 16 ಎಕರೆ 16 ಗುಂಟೆ ಜಮೀನು ಉಳಿಯಬೇಕು ಎಂದು ನುಡಿಯುತ್ತಾರೆ. ಪ್ರತಿವಾದಿಯವರಿಂದ ಜಮೀನನ್ನು ಹೊಡೆದುಕೊಳ್ಳಲು ನಾನು ಉಳಿಕೆ ಜಮೀನು 16 ಎಕರೆ 16 ಗುಂಟೆ ಇರುತ್ತದೆ ಅಂತ ಸುಳ್ಳು ಚೆಕ್ಕುಬಂಧಿಯನ್ನು ತೋರಿಸಿ, ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ತಮ್ಮ ಜಮೀನಿನಲ್ಲಿ ಹುಣಸೆ ಮರಗಳನ್ನು ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 60 ಹುಣಸೆ ಮರ, 40 ಹೊಂಗೆ ಮರ ಮತ್ತು 6 ಬ್ಯಾಲದ ಮರವನ್ನು ನನ್ನ ತಂದೆ ಬೆಳೆಸಿರುತ್ತಾರೆ ಅದಕೋಸ್ಕರ ಪ್ರತಿವಾದಿಯವರೆಲ್ಲರೂ ಗಲಾಟೆ ಮಾಡುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರಿಗೆ ಸೇರಿದ 23 ಹುಣಸೆ ಮರ ಮತ್ತು 6 ಹೊಂಗೆ ಮರಗಳನ್ನು ಕಿತ್ತುಕೊಳ್ಳಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 60 ಹುಣಸೆ ಮರ, 40 ಹೊಂಗೆ ಮರ ಮತ್ತು 6 ಬ್ಯಾಲದ ಮರಗಳು ನನಗೆ ಸೇರಿರುತ್ತವೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನಲ್ಲಿ 60 ಹುಣಸೆ ಮರ, 40 ಹೊಂಗೆ ಮರ ಮತ್ತು 6 ಬ್ಯಾಲದ ಮರಗಳ ಕುರಿತು ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯಲ್ಲಿ ಪ್ರತಿವಾದಿಯವರು ಉತ್ತರ ದಿಕ್ಕಿನ ಕಡೆ 1 ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಆ ರೀತಿ ಒತ್ತುವರಿ ಮಾಡಿಕೊಂಡು ಸುಮಾರು 10 ವರ್ಷಗಳಾಗಿರುತ್ತವೆ. ದಾವಾ ಆಸ್ತಿಯ ಉತ್ತರ ದಿಕ್ಕಿನ ಕಡೆ ಪ್ರತಿವಾದಿಯವರಿಗೆ ಸೇರಿದ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

8. ನನ್ನ ತಂದೆ ಉತ್ತರ ದಿಕ್ಕಿನ ಜಮೀನನ್ನು ಭೀಮಾಚಾರಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಉಳಿಕೆ ಜಮೀನಿನ ಪೂರ್ವ ದಿಕ್ಕಿಗೆ ಪ್ರತಿವಾದಿಯವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ರಂಗಪ್ಪನವರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರ ತಾಯಿ ತೀರಿಕೊಂಡ ನಂತರ ಪ್ರತಿವಾದಿಯವರ ಹೆಸರಿಗೆ ಪೌತಿ ಖಾತೆ ಆಗಿರುವುದನ್ನು ನಾನು ಇಲ್ಲಿಯವರೆಗೆ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ನನಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿಲ್ಲ, ಆದರೆ ನಾನೇ ಅವರ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ನನಗೆ ವ್ಯಾಜ್ಯ ಕಾರಣ ಇಲ್ಲದಿದ್ದರೂ ಕೂಡ ದಾಖಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.